ಅನುರಣಿಸಿದಂತಾಯಿತು. ಚಹಾವಾಲಾ ಭೈಯ್ಯಾನಿಗೆ ಬೈನಾಕ್ಯುಲರ್‌ನ ಬ್ಯಾಗ್ ಕೊಟ್ಟು ನೀರಿಗೆ ಧುಮುಕಿ ವ್ಯಕ್ತಿಯ ಬಳಿ ಈಜಿದೆ. ಬಳಿಸಾರುತ್ತಲೇ 'ಅಚ್ಯ್ಯಾ' ಎಂದು ಉತ್ಸಾಹದಿಂದ ಕೂಗಿದೆ. ತಿರುಗಿದವನ ಮುಖ ಅಚ್ಚರಿಯಿಂದ ಕೂಡಿತ್ತು. 'ಕೌನ್... ಕೌನ್ ಹೈ ಆಪ್?' ಎಂದಾಗ ಆಶಾಭಂಗವಾದಂತಾಯಿತು. ಆದರೆ, ಮುಖದಲ್ಲಿ ಅದೇ ಕುರುಹುಗಳು... ನೀಳ ನಾಸಿಕ, ಬಲಗೆನ್ನೆಯ ಮೇಲೆ ಚಿಕ್ಕ ಗಾಯದ ಗುರುತು... ಮಾವಿನ ಮರದಿಂದ ಕಾಂಪೌಂಡಿನ ಮೇಲೆ ಬಿದ್ದದ್ದು ಇನ್ನೂ ಸ್ಪಷ್ಟವಾಗಿ ನೆನಪಿತ್ತು. ಆ ವ್ಯಕ್ತಿಯ ಕಣ್ಣಲ್ಲಿ ಅಚ್ಚರಿಯೊಂದಿಗೆ ನೆನಪಿಸಿಕೊಳ್ಳುವ ಕುತೂಹಲ. 'ಕ್ಯಾ ಚಾಹಿಯೆ?' ಎಂದವನನ್ನು ದೃಷ್ಟಿಸಿದೆ. ನಾನೂ ವಿಪರೀತವಾಗಿ ಬದಲಾದ ಅರಿವಾಯಿತು. 'ಅಚ್ಯುತ... ನಾ ಚಿದು... ಚಿದಂಬರ... ನಿನ್ನ ದೋಸ್ತ' ಎಂದೆ. 'ಕೌನ್ ಹೈ ಆಪ್? ಮುಝೆ ನಹಿ ಮಾಲೂಮ್' ಎಂದವ ತಿರುಗಿ ನೀರಿನಲ್ಲಿ ಮುಳುಗಿದ. ನಿರಾಸೆಯೊಂದಿಗೆ ಗೆಳೆಯ ಗುರುತಿಸಲಿಲ್ಲವೆಂಬ ನೋವು... ಆಘಾತ. ಬೇರೆಯವನಿರಬಹುದೆ? 'ಅಚ್ಯ್ಯಾ... ನನ್ನ ಜೋಡಿ ಆಟಾ ಆಡಬ್ಯಾಡಾ. ನಿನ್ನ ಬೆನ್ನ ಮ್ಯಾಲೆ ನನ್ನ ಹೆಸರು ಬರದದ ಚಿದು... ಅಂತ' ಎಂದು ಹೇಳುವಷ್ಟರಲ್ಲಿ ಕಣ್ಣಾಲಿಗಳು ಒದ್ದೆಯಾಗಿದ್ದವು. ಅಲ್ಲಿಯೂ ಗಂಗಾಪ್ರವಾಹ ಹರಿಯಿತು. 'ಚಿದ್ಯಾ...' ಎಂದವನೇ ಅಪ್ಪಿಕೊಂಡ. ಸುಮಾರು ನಲವತ್ತು ವರ್ಷಗಳ ನಂತರದ ಬಿಗಿ ಅಪ್ಪುಗೆಯಲ್ಲಿ ಎರಡೂ ಹೃದಯಗಳು ತುಂಬಿ ಬಂದಿದ್ದವು. ಅತ್ತಿತ್ತ ನೋಡುತ್ತ 'ಬಿರಜೂ' ಎಂದು ಕೂಗಿದ. ತುಸು ದೂರದಲ್ಲಿ ತೇಲುತ್ತಿದ್ದ ತೆಪ್ಪ ಬಳಿಸಾರಿತು. 'ಚಲ್... ಆಜ ಹಮ ಗಂಗಾಜಿ ಕಿ ಸೈರ್ ಕರಾ' ಎಂದ. ಅವನು ನಗುತ್ತ 'ಬೈಠಿಯೆ ಸಾಬ್' ಎನ್ನುತ್ತ ನಮಗೆ ಕೂಡಲು ಅನುವು ಮಾಡಿಕೊಟ್ಟ. 'ಅಂವಗ ಕನ್ನಡ ಏನೂ ತಿಳಿಯೂದಿಲ್ಲ. ನಾವು ಆರಾಮಾಗಿ ಮಾತಾಡಬಹುದು' ಎನ್ನುತ್ತ ನನ್ನನ್ನು ಕೈ ಹಿಡಿದು ತೆಪ್ಪದೊಳಗೆ ಎಳೆದುಕೊಂಡ. ಇಬ್ಬರೂ ಒದ್ದೆಬಟ್ಟೆಯಲ್ಲಿದ್ದೆವು. 'ಇಷ್ಟು ವರ್ಷದ ಮ್ಯಾಲೆ ಮಡೀಲೆ ಭೆಟ್ಟಿ ಆಗಲಿಕ್ಕತ್ತೇವಿ' ಎಂದು ನಕ್ಕೆವು. ಇಬ್ಬರ ಭಾವನೆಗಳು ಉಕ್ಕೇರುತ್ತಿದ್ದಂತೆ ತೆಪ್ಪ ತೇಲತೊಡಗಿತು.

'ಹೌದು ಚಿದ್ಯಾ... ನಾ ನಿನ್ನ ಅಚ್ಯ್ಯಾನ... ಅಚ್ಯುತ' ಎಂದು ದೀರ್ಘವಾಗಿ ಉಸಿರೆಳೆದುಕೊಂಡವನನ್ನು ದಿಟ್ಟಿಸಿದೆ. ನನ್ನಲ್ಲಿ ಸಾವಿರಾರು ಪ್ರಶ್ನೆಗಳು ಪುಟಿದೆದ್ದವು. 'ಅಲ್ಲೋ... ಇಷ್ಟ ದಿನಾ ನೀ ಎಲ್ಲಿದ್ದಿ? ಹೆಂಗಿದ್ದಿ? ನೀ ಸುಳಿಗೆ ಸಿಕ್ಕು ಸತ್ತು ಹೋದ್ಯಂತ ಊರಾಗಿನ ಮಂದಿ ಹೇಳಿದ್ರು. ಮನಿಯಾವ್ರು ಅದನ್ನ ನಂಬ್ಯಾರ. ಎಲ್ಲಾರೂ ನಿನ್ನ ಹುಡುಕಿದ್ರು. ನಾ ಅಂತೂ ಭಾಳ... ಭಾಳ ಹುಡುಕಿದ್ಯಾ. ನೀ ನೋಡಿದ್ರ ಇಲ್ಲಿ ಈಜಕೋತ ಕೂತಿದಿ. ಇದೆಲ್ಲಾ ಹೆಂಗಾತು?' ಎಂದು ಒಮ್ಮೆಲೆ ಕೇಳಿದೆ. ನಸುನಕ್ಕು ಸಾವಧಾನವಾಗಿರಲು ಕೈ ಮಾಡಿದ ಅಚ್ಯುತ ದಿಗಂತವನ್ನೇ ಒಂದು ಕ್ಷಣ ದಿಟ್ಟಿಸಿದ. ತುಸು ದೂರದ ಹನುಮಾನ್ ಘಾಟ್‌ನಲ್ಲಿ ಏನೋ ಚಟುವಟಿಕೆಗಳು ನಡೆಯುತ್ತಿದ್ದವು. ಕಾಶಿಯ ಪೂಜಾರಿಗಳು... ಎಂದರೆ ಪಾಂಡಾಗಳು ಕಿತ್ತಾಡುತ್ತಿದ್ದರು. ದುಡ್ಡು ಹಂಚಿಕೊಳ್ಳುತ್ತ ಎಳೆದಾಡುತ್ತಿದ್ದರು. ಬಿರಜೂ 'ಉನ್ ಪಾಂಡಾವೊಂಕೊ ದೇಖಿಯೆ ಸಾಬ್. ಲೋಗೊಂಕೆ ಸಾಮನೆ ಸಂತೋಂಕೆ ಮೀಠಿ ಬೋಲಿ ಬೋಲತೆ ಹೈ. ಯಂಹಾ ಪೈಸೆ ಕೆ ಲಿಯೆ ಕೈಸೆ ಝಗಡ್ ರಹೆ ಹೈ. ಹಾಥಿ ಕೆ ದಾಂತ್ ಖಾನೆ ಕಿ ಅಲಗ ಔರ್ ದಿಖಾನೆ ಕಿ ಅಲಗ್ ಹೋತೆ ಹೈ' ಎಂದ. ಅತ್ತಲೇ ನೋಡುತ್ತ, 'ಸಚ್ ಹೈ ಬಿರಜೂ' ಎಂದವ ನನ್ನತ್ತ ತಿರುಗಿ 'ನಮ್ಮನ್ಯಾಗೂ ಹಿಂಗ ಆತೊ. ಹಾಥಿ ಕೆ ದಾಂತದ್ದ ಕಥಿ. ಕಾಣಿಸೋದ ಬ್ಯಾರೇ. ಇರೋದೇ ಬ್ಯಾರೇ ಆತು. ಅದಕ್ಕ ಇಷ್ಟೆಲ್ಲಾ ಕಥಿ ಆತು...' ಎಂದವ ಮತ್ತೊಮ್ಮೆ ದೀರ್ಘವಾಗಿ ಉಸಿರೆಳೆದುಕೊಂಡ.

'ಪಿಯು ಓದಲಿಕ್ಕಂತ ನಿನ್ನ ನಿಮ್ಮಕ್ಕನ ಊರಿಗೆ ಕರಕೊಂಡು ಹೋದ್ರು. ನಾನೂ ಅಥಣಿಗೆ ಟ್ಯೂಷನ್‌ಕ್ಕ ಹೋಗಿ ಓದಲಿಕ್ಕತ್ತಿದ್ದೆ. ಒಮ್ಮೆ ಅವ್ವ ಮತ್ತ ಮೋಹನಣ್ಣ ಯಾರದೋ ಮದವಿಗೆ ಬಿಜಾಪುರಕ್ಕ ಹೋಗಿದ್ರು. ರಾತ್ರಿ ನನ್ನ ಖೋಲ್ಯಾಗ ನಾ ಮಲಕೊಂಡಿದ್ದೆ. ಸುಶೀಲಾ ವೈನಿ ಬಂದು ನನ್ನ ಮೈಮ್ಯಾಲೆ ಬಿದ್ದರು. ನಾ ಗಾಬರಿ ಆದ್ಯಾ. ಅವರ್‍ನ ಸರಿಸಿ ಎದ್ದು ನಿಂತ್ಯಾ. 'ವೈನಿ... ನೀವು ನನಗ ತಾಯಿ ಇದ್ದಂಗ. ಹಿಂಗೆಲ್ಲಾ ಮಾಡಬಾರದು. ಅಣ್ಣಾ ಏನ ತಿಳಕೋತಾನ?' ಅಂತ ಕೇಳಿದೆ. 'ನಿಮ್ಮಣ್ಣನ ಕಡೆ ಗಂಡಸ್ತನ ಇದ್ದಿದ್ರ ನಾ ನಿಮ್ಮ ಕಡೆ ಯಾಕ ಬರ್ತಿದ್ದೆ?' ಅಂದರು ವಕ್ರವಾಗಿ. 'ಅವಸರ ಮಾಡಬ್ಯಾಡ್ರಿ ವೈನಿ. ಮುಂಬೈಕ್ಕ ಹೋಗೋಣು. ಛೊಲೊ ಡಾಕ್ಟರಿಗೆ ತೋರಸೋಣು. ಈಗೇನು ಬೇಕಾದಷ್ಟು ಔಷಧ ಅವ. ನಿಮಗ ಮೋಹನ ಅಣ್ಣಾನ ಕಡಿಂದ ಮಕ್ಕಳಾಗ್ತಾವ'